ಇ) ಹೌದು.

ಈ) ವಿಜಾಪುರ ತಾಲ್ಲೂಕಿನ ಮಹಾಲಬಾಗಾಯತ್ ಗ್ರಾಮದ ರಿ.ಸ.ನಂ.313ರಲ್ಲಿ 0–30 ಗುಂಟೆ ಹಾಗೂ 314ರಲ್ಲಿ 12–35 ಎಕರೆ ಒಟ್ಟು 13–25 ಎಕರೆ ಜಮೀನನ್ನು ಮಿನಿ ವಿಧಾನಸೌಧ ನಿರ್ಮಾಣಕ್ಕೆ ಗುರುತಿಸಲಾಗಿದೆ.

ಉ) ಅಂದಾಜು ವೆಚ್ಚ ರೂ. 6.00 ಕೋಟಿ.

ಊ) ಸಂಪನ್ಮೂಲ ಲಭ್ಯವಾದ ಕೂಡಲೇ ಮಿನಿ ವಿಧಾನಸೌಧದ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

132(331) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಚನೆ ಯಾವ ಕಾಯಿದೆಯಡಿ ಮಾಡಲಾಗಿದೆ:

ಆ) ಈ ಮಂಡಳಿಯ ಅಧ್ಯಕ್ಷರ ನೇಮಕಾತಿಗೆ ಸಂಬಂಧಪಟ್ಟಂತೆ ಕಾಯಿದೆಯಡಿ ಮಾಡಿರುವ ಅರ್ಹತೆಗಳೇನು:

ಇ) ಹಾಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರು ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವರೇ;

ಈ) ಹಾಗಿಲ್ಲವಾದರೆ, ಅವರ ನೇಮಕವನ್ನು ಅಸಿಂಧುಗೊಳಿಸಿ ಹೊಸ ಅಧ್ಯಕ್ಷರನ್ನು ಸರ್ಕಾರ ನೇಮಿಸಲು ಕ್ರಮ ಕೈಗೊಳ್ಳುವುದೆ:

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಜಲ ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ 1974 ರ ಸೆಕ್ಷನ್ 4ರ ಅಡಿಯಲ್ಲಿ ರಚಿಸಲಾಗಿದೆ.

ಆ) ಜಲ ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ 1974ರ ಸೆಕ್ಷನ್ 4(2)(ಎ)ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ನೇಮಕಕ್ಕೆ ಅರ್ಹತೆಯನ್ನು ಕೆಳಕಂಡಂತೆ ನಿಗದಿಗೊಳಿಸಲಾಗಿದೆ.

"Chairman, being a person having special knowledge or practical experience in respect of matters relating to environmental protection or a person having knowledge and experience in administering institutions dealing with teh matters aforesaid, to be nominated by the State Government.

ಇ) ಹೌದು.

ಈ) ಹಾಲಿ ಇರುವ ಅಧ್ಯಕ್ಷರ ಅವಧಿಯು ಕಾನೂನಿನ್ವಯ ಮುಗಿದಿರುವುದರಿಂದ ಹೊಸ ಅಧ್ಯಕ್ಷರನ್ನು ನೇಮಿಸುವ ಸಂಬಂಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

133(333) ಶ್ರೀ ಬಸವಣ್ಣೆಪ್ಪ .ಜಿ (ಹೊಳೆಹೊನ್ನೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಹೊಸದಾದ ಕೈಗಾರಿಕಾ ನೀತಿಯನ್ನು ಯಾವಾಗ ಘೋಷಿಸುವುದು;